ತೆಗೆದುಕೊಳ್ಳುವುದು ಬೇಡ ಅಂತ ಹೇಳಲಿಲ್ಲ. ಎಸ್.ಸಿ.ಪಿ. ಅಮೌಂಟನಲ್ಲಿ ಟಿ.ಪಿ. ಖರೀದಿ ಮಾಡಬೇಡಿ ಎಂದು ನನ್ನ ಮಾದ ಹೇಳಿಕೆ ಅಧ್ಯಕ್ಷರೆ.

ಶ್ರೀ ಕಾಗೋಡು ತಿಮ್ಮಪ್ಪ:- ಬೇರೆ ಹಣ ಕೊಡಿಸಿ.

ಅಧ್ಯಕ್ಷರು:- ಆಯಿತು. ಬೇರೆ ಹಣ ಉಪಯೋಗಿಸುವುದಕ್ಕೆ ವ್ಯವಸ್ಥೆ ಮಾಡಿಸಿ.

ಶ್ರೀ ವೈ.ರಾಮಕೃಷ್ಣ:- ನಾನು ಹೇಳುತ್ತಿರುವುದು 23-12-1995ರಲ್ಲಿ ಈ ಒಂದು ಗೌರ್ನಮೆಂಟ್ ಆರ್ಡರ್‌ನಲ್ಲಿ ನೀವು ಸ್ಯಾಂಕ್ಷನ್ ಮಾಡಿದ್ದೀರಿ. ಇದರಲ್ಲಿ ಏನು ಬರೆದಿದ್ದೀರಿ? ಭವನ ಕಾರ್ಯವನ್ನು ಆದಷ್ಟು ಬೇಗ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದು. ಭೂಮಿ ಸಿಕ್ಕಿದೆಯೆ? ಎಂ.ಎಲ್.ಎ. ಯವರನ್ನು ಎಲ್ಲಿ ಕಟ್ಟಬೇಕು ಅಂತ ಕೇಳಿದ್ದೀರಾ? ಅವರೇನಾದರೂ ಸಲಹೆ ಪಡೆದಿರಾ? ಹರಿಜನ ಕಾಲೋನಿಯಲ್ಲಿ ಕಟ್ಟಿದ್ದೀರಾ? ಕಟ್ಟಿದ್ದರೆ ಯಾವ ಮಟ್ಟದಲ್ಲಿದೆ ಎನ್ನುವ ವಿವರಗಳನ್ನು ಕೊಡಿ.

ಅಧ್ಯಕ್ಷರು:- ಕಳುಹಿಸಿಕೊಡುತ್ತಾರೆ. ಕಮಲಾಪುರಕ್ಕೆ ಸಂಬಂಧಪಟ್ಟಂತೆ ಪರ್ಟಿಕ್ಯುಲರ್ಸ್ ಕಳುಹಿಸಿಕೊಡಿ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಅಧ್ಯಕ್ಷರೆ, ಗೌರ್ನಮೆಂಟ್ ಆರ್ಡರ್ ಆಗಿರುವುದು, ಪ್ರತಿಯೊಂದು ಕ್ಷೇತ್ರಕ್ಕೆ ಒಂದು ಅಂಬೇಡ್ಕರ್ ಭವನ ಕೊಡಬೇಕು ಎಂದು ತೀರ್ಮಾನ ಆಗಿದೆ. ಪ್ರತಿಯೊಂದು ಕೇರಿಯಲ್ಲೂ ಕಟ್ಟಿಸುವುದಕ್ಕೆ ಸಾಧ್ಯ ಇಲ್ಲ, ಪ್ರತಿಯೊಂದು ಕ್ಷೇತ್ರದ ಶಾಸಕರು ದಯಮಾಡಿ ಕಳುಹಿಸಿದರೆ ಅದನ್ನು ಕಟ್ಟಿಸುತ್ತೇವೆ.

ಶ್ರೀ ವೈ.ರಾಮಕೃಷ್ಣ:- ಇದು ಕಮಲಾಪುರಕ್ಕೆ ಸಂಬಂಧಪಟ್ಟಿದ್ದುದು.

ಅಧ್ಯಕ್ಷರು:- ಕಮಲಾಪುರಕ್ಕೆ ಸಂಬಂಧಪಟ್ಟಂತೆ ವಿವರವನ್ನು ನಾನು ತರಿಸಿಕೊಡುತ್ತೇನೆ.

ವಿಷಯ:- ಬೆಂಗಳೂರಿನ ಹೊಸ ಸರ್ಕಾರಿ ವಿದ್ಯುತ್ ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 64 (583)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರಿನ ಹೊಸ ಸರ್ಕಾರಿ ವಿದ್ಯುತ್ ಕಾರ್ಖಾನೆಯ ನಷ್ಟವನ್ನು ಅನುಭವಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಅನುಭವಿಸಿರುವ ನಷ್ಟದ ಪ್ರಮಾಣವೆಷ್ಟು ಹಾಗೂ

ಈ ನಷ್ಟಕ್ಕೆ ಕಾರಣಗಳೇನು?

ಇ) ಈ ಕಾರ್ಖಾನೆಯನ್ನು ಪುನರುಜ್ಜೀವಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಈ) ಈ ಕಾರ್ಖಾನೆಯಲ್ಲಿ ತಯಾರಿಸುವ ವಿದ್ಯುತ್ ಉಪಕರಣಗಳ ಮಾರುಕಟ್ಟೆಯನ್ನು ಉತ್ತಮಪಡಿಸಲು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಮತ್ತು ಸಂಪನ್ಮೂಲ ಅಭಿವೃದ್ಧಿ ಸಚಿವರು):-

ಅ) ಹೌದು.

ಆ) 31-3-1996ರವರೆಗೆ ಎನ್.ಜಿ.ಇ.ಎಫ್.ನ ಸಂಚಿತ ನಷ್ಟಗಳು ರೂ. 135.72 ಕೋಟಿಗಳಾಗಿರುತ್ತವೆ. 1980ರ ಮಧ್ಯಭಾಗದಿಂದಲೂ ಎನ್.ಜಿ.ಇ.ಎಫ್. ಸಂಸ್ಥೆಯ ಉತ್ಪಾದಕತೆ ಹಾಗೂ ಲಾಭಗಳು ಇಳಿಮುಖವಾಗುತ್ತಾ ನಡೆದಿವೆ. ಬಡ್ಡಿ ವೆಚ್ಚಗಳು ಸಿಬ್ಬಂದಿ ಹಾಗೂ ಇತರೆ ಒದಗಣೆಗಳ ವೆಚ್ಚ ಏರಿದರೆ ಅನುಗುಣವಾಗಿ ಉತ್ಪಾದನೆಯ ಏರಿಕೆಯಾಗಲಿಲ್ಲ. ಖಾಸಗಿ ವಲಯದಲ್ಲಿರುವ ಪ್ರತಿಸ್ಪರ್ಧಿಗಳು ಸುಧಾರಿತ ತಯಾರಿಕಾ ವಿಧಾನಗಳು ಹಾಗೂ ಉಪಕರಣಗಳನ್ನು ಬೃಹತ್ ಪ್ರಮಾಣದಲ್ಲಿ ಹೊರಗಿನಿಂದ ತರಿಸಿಕೊಳ್ಳುವ ಮೂಲಕ ಒದಗಣೆ ವೆಚ್ಚಗಳನ್ನು ಹಾಗೂ ತಯಾರಿಕಾ ಕಾಲಾವಧಿಯನ್ನು ಕಡಿಮೆ ಮಾಡಿಕೊಂಡರೆ, ಎನ್‌ಜಿಇಎಫ್ ಸಂಸ್ಥೆಯು ತನ್ನ ಕಾರ್ಮಿಕರನ್ನು ಕಡಿಮೆಗೊಳಿಸದೆ ಗರಿಷ್ಠ ಪ್ರಮಾಣದಲ್ಲಿ ಸಂಸ್ಥಾರ್ಗತ ತಯಾರಿಕೆಯನ್ನೇ ನೆಚ್ಚಿಕೊಂಡಿತು. ಹಳೆಯ ರೀತಿಯ ವ್ಯವಸ್ಥೆ ಮತ್ತು ಕಾರ್ಯ ವಿಧಾನಗಳು, ಉತ್ಪನ್ನ ಹಾಗೂ ವಿನ್ಯಾಸದಲ್ಲಿ ಸಾಕಷ್ಟು ನವೀಕರಣ ಇಲ್ಲದಿರುವಿಕೆ, ಯಂತ್ರ ಹಾಗೂ ಸಲಕರಣೆಗಳ ವೈಪಲ್ಯ, ಮಾರುಕಟ್ಟೆ ಪಾಲಿನಲ್ಲಿ ಇಳಿತ, ಲಾಭಾವಕಾಶಗಳು ಕಡಿಮೆಯಾಗಿದ್ದು (ಕಳಪೆಯಾದ ಕಾರ್ಯ ಸಂಸ್ಕೃತಿ, ಸರಿಯಾದ ಹೊಣೆಗಾರಿಕೆ ಹಾಗೂ ಪ್ರೇರಣೆಗಳು ಇಲ್ಲವಾಗಿದ್ದು) ಇದೇ ಮೊದಲಾದ ಕಾರಣಗಳಿಂದಾಗಿ ತಯಾರಿಕಾ ಕಾಲಾವಧಿ ಬಹು ದೀರ್ಘವಾಗಿದ್ದರಿಂದ ಉತ್ಪಾದನಾ ಪ್ರಮಾಣ ತೀರ ಕಡಿಮೆಯಾಯಿತು.

ಇ) ಸರ್ಕಾರವು ಸಂಸ್ಥೆಯ ಪುನರುಜ್ಜೀವನಕ್ಕಾಗಿ ಒಂದು ಸ್ವಾವಲಂಬೀ ಆಧಾರದ ಪುನರ್ವಸತೀಕರಣ ಸೂತ್ರಕ್ಕೆ ಅನುಮೋದನೆ ನೀಡಿದ್ದು ಇದಕ್ಕಾಗಿ 20 ಕೋಟಿ ರೂ.ಗಳನ್ನು ನೀಡಿದೆ ಹಾಗೂ 1995-96ರಿಂದಾರಂಭಿಸಿ 5 ವರ್ಷಗಳ ಅವಧಿಯವರೆಗೆ ಮಾರಾಟ ತೆರಿಗೆಯ ವಸೂಲಿಯನ್ನು ಮುಂದೂಡಿದೆ.

ಈ) ತನ್ನ ಉತ್ಪನ್ನಗಳನ್ನು ಮಾರಾಟ ಮಾಡುವ ವಿಷಯದಲ್ಲಿ ಎನ್.ಜಿ.ಇ.ಎಫ್.ಗೆ ಯಾವುದೇ ಸಮಸ್ಯೆ ಇಲ್ಲ. ಈ ವರ್ಷದ ಅಂದಾಜಿನಂತೆ 195.68 ಕೋಟಿ ರೂ.ಗಳ ಉತ್ಪಾದನೆಗೆ ಪೂರ್ಣ ಪ್ರಮಾಣದಲ್ಲಿ ಆದೇಶಗಳನ್ನು ಕಾದಿರಿಸಲಾಗಿದೆ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಎನ್.ಜಿ.ಇ.ಎಫ್. ಕಾರ್ಖಾನೆ

ನಷ್ಟದಲ್ಲಿದೆಯೋ ಎಂದು ಒಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ನಷ್ಟವಾಗುವುದಕ್ಕೆ ಏನೇನು ಕಾರಣಗಳು ಎಂಬುದನ್ನು ಮಾನ್ಯ ಮಂತ್ರಿಗಳು ಸವಿಸ್ತಾರವಾಗಿ ಕೊಟ್ಟಿದ್ದಾರೆ. ಸುಮಾರು 135 ಕೋಟಿ ರೂಪಾಯಿಗಳು ನಷ್ಟವಾಗಿದ್ದು, ಕಳೆದ ವರ್ಷಗಳಿಂದ ನಷ್ಟವಾಗಿರುವುದಕ್ಕೆ ಕಾರಣಗಳನ್ನು ಕೊಟ್ಟಿದ್ದಾರೆ. ''ಈ ಕಾರ್ಖಾನೆ ಪುನರುಜ್ಜೀವಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ'' ಎಂದು ನಾನು ಒಂದು ಪ್ರಶ್ನೆ ಕೇಳಿದ್ದೇನೆ. ಇದಕ್ಕೆ ಸಮರ್ಪಕವಾಗಿ ಉತ್ತರ ಬಂದಿಲ್ಲ. ಸರ್ಕಾರವು ಸಂಸ್ಥೆಯ ಪುನರುಜ್ಜೀವನಕ್ಕಾಗಿ ಸುಮಾರು 20 ಕೋಟಿ ರೂಪಾಯಿ ಕೊಟ್ಟಿದೆ ಅಂತ ಹೇಳಿದ್ದಾರೆ. ಬರೀ 20 ಕೋಟಿ ರೂಪಾಯಿ ಕೊಟ್ಟರೆ ಸಂಸ್ಥೆಯೇನೂ ಉದ್ಧಾರವಾಗುವುದಿಲ್ಲ. ಏಕೆಂದರೆ ಎನ್.ಜಿ.ಇ.ಎಫ್. ಸಂಸ್ಥೆ ಏನಿದೆ ಅದರಲ್ಲಿ 15-20 ವರ್ಷಗಳ ಹಿಂದೆ ಇದ್ದ ಹಳೇ ಟೆಕ್ನಾಲಜಿ ಇದೆ. ಹೊಸ ಟೆಕ್ನಾಲಜಿಗಳು ಬೇರೆ ಬೇರೆ ಸಂಸ್ಥೆಗಳಲ್ಲಿ ಬಂದಿವೆ. ಇಲ್ಲಿ ಹಳೇ ಟೆಕ್ನಾಲಜಿ ಇಟ್ಟುಕೊಂಡಿದ್ದಾರೆ ಆಗುವುದಿಲ್ಲ. ಮತ್ತು ಅಲ್ಲಿ ಸಾವಿರಾರು ಜನ ಎಕ್ಸ್ಸ್ ಸ್ಟಾಫ್ ಇದ್ದಾರೆ. ಈಗಿರತಕ್ಕ ಮಾರ್ಕೆಟಿಂಗ್ ವ್ಯವಸ್ಥೆಯಲ್ಲಿ ತೊಂದರೆಯಾಗಿದೆ. ಈ ಅಂಶಗಳಿಗೆ ಉತ್ತರ ಕೊಟ್ಟಿಲ್ಲ. ಅದನ್ನು ಹೇಳಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಈ ಕೈಗಾರಿಕೆಗೆ ಅನಾರೋಗ್ಯ ಆಗಿದೆ, ಮತ್ತು ಮಾರ್ಚ್ 1996ಕ್ಕೆ 135.70 ಕೋಟಿ ಅಕ್ಯುಮುಲೇಟೆಡ್ ಲಾಸ್ ಇದೆ. ಹಾಗಾಗಿ ಈ ಕೈಗಾರಿಕೆಯನ್ನು ರಿಹ್ಯಾಬಲಿಟೇಟ್ ಮಾಡುವ ಉದ್ದೇಶದಿಂದ ಪ್ರಸ್ತಾವನೆ ಏನು ಬಂದಿತ್ತು, ಪ್ರೊಪೋಸಲ್‌ಗೆ ಸರ್ಕಾರ ಈಗಾಗಲೇ ಮಾನ್ಯತೆ ಕೊಟ್ಟಿದೆ. ಆ ಪ್ರೊಪೋಸಲ್‌ನಲ್ಲಿ 1995-96ನೇ ಇಸವಿಯಿಂದ 1997-98ರವರೆಗೆ 20 ಕೋಟಿ ರೂಪಾಯಿಗಳನ್ನೂ ಈ ಕೈಗಾರಿಕೆಗೆ ಕೊಡುತ್ತಾ ಇದೆ. 1995-96ರಲ್ಲಿ ಈಗಾಗಲೇ 8 ಕೋಟಿ ರೂಪಾಯಿಗಳನ್ನು ನಾವು ರಿಲೀಸ್ ಮಾಡಿದ್ದೇವೆ. 1996-97ರಲ್ಲಿ 8 ಕೋಟಿ ಕೊಡಬೇಕು. ಅದರಲ್ಲಿ ಈಗಾಗಲೇ 3 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. 1997-98ರಲ್ಲಿ 4 ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಅಷ್ಟೇ ಅಲ್ಲ ಈ ಕೈಗಾರಿಕೆಗೆ ಬೇಕಾಗುವ ವರ್ಕಿಂಗ್ ಕ್ಯಾಪಿಟಲ್ 57 ಕೋಟಿ ರೂಪಾಯಿಗೆ ಸರ್ಕಾರ ಗ್ಯಾರಂಟಿ ಕೂಡ ಕೊಡುವುದಕ್ಕೆ ಒಪ್ಪಿಕೊಂಡಿದೆ. ಮೂರನೆಯದು ಸೇಲ್ಸ್‌ಟ್ಯಾಕ್ಸ್ ಡೆಫರ್‌ಮೆಂಟ್. 1995ರಿಂದ 5 ವರ್ಷಗಳ ಕಾಲ ಈ ಕೈಗಾರಿಕೆಗೆ ಸೇಲ್ಸ್‌ಟ್ಯಾಕ್ಸ್ ಡೆಫರ್‌ಮೆಂಟ್ ಕೊಡಬೇಕೆಂದೂ ಸಹ ಸರ್ಕಾರ ತೀರ್ಮಾನ ಮಾಡಿ ಇದರಿಂದ ಈ ಕೈಗಾರಿಕೆಗೆ ಸಾಧಾರಣ 51 ಕೋಟಿ ರೂಪಾಯಿ ಸಿಗುತ್ತದೆ. ಡೆಫರ್‌ಮೆಟ್ ಅಂದರೆ ಈ ಹಣ 6ನೇ ವರ್ಷದಿಂದ ಕೊಡಬೇಕಾಗುತ್ತದೆ. ಆದರೆ ಈ ಹಣವನ್ನು ವರ್ಕಿಂಗ್ ಕ್ಯಾಪಿಟಲ್ ಆಗಿ ಉಪಯೋಗ ಮಾಡಬಹುದು. ಅದು ಒಟ್ಟು ಸಾಧಾರಣ 51 ಕೋಟಿ ರೂಪಾಯಿ ಆಗುತ್ತದೆ. ಅದೇ ಪ್ರಕಾರ ಸರ್ಕಾರದಿಂದ 17.7 ಕೋಟಿ ರೂಪಾಯಿ ನಾವು ಸಾಲ ಕೊಟ್ಟಿದ್ದೇವೆ.

ಅದರ ಮೇಲೆ 6 ಕೋಟಿ ರೂಪಾಯಿಗಳ ಬಡ್ಡಿಯನ್ನೂ ಸಹ ವೇವ್ ಮಾಡಿದ್ದೇವೆ.

ಇದಕ್ಕೆ ಹಿಂದೆ 18 ಪರ್ಸೆಂಟ್ ಇಂಟರೆಸ್ಟ್ ಕೊಡಬೇಕಾಗಿದ್ದು ಇದು ಅವರಿಗೆ ತಪ್ಪುತ್ತದೆ. ಹೀಗೆ ಹಲವಾರು ರೀತಿಯಲ್ಲಿ ಈ ಕೈಗಾರಿಕೆಯನ್ನು ರಿಹ್ಯಾಬಲಿಟೇಟ್ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಅಷ್ಟೇ ಅಲ್ಲ ಈಗಾಗಲೇ ವಾಲಂಟರಿ ರಿಟೈರ್‌ಮೆಂಟ್ ಸ್ಕೀಂ ಇಂಟ್ರೊಡ್ಯೂಸ್ ಮಾಡಿದ್ದೇವೆ. ಅಲ್ಲಿ 5600 ಜನ ಕಾರ್ಮಿಕರಿದ್ದಾರೆ. ಅದರಲ್ಲಿ ಎಲಿಜಿಬಲ್ ಅಪ್ಲಿಕೇಷನ್ಸ್ 800 ಇವೆ. ಈಗಾಗಲೇ 500 ಜನ ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಂಡಿದ್ದಾರೆ. ಬಾಕಿ ಉಳಿದ ಎಂಪ್ಲಾಯೀಸ್ ಬರುವ ಮೂರು ತಿಂಗಳಲ್ಲಿ ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳುತ್ತಾರೆ. ಹೀಗಾಗಿ ಮುಖ್ಯವಾಗಿ ಇಂಟರೆಸ್ಟ್ ಬರ್ಡನ್, ಅದರ ನಂತರ ವರ್ಕಫೋರ್ಸ್‌ನಿಂದ ಈ ಕೈಗಾರಿಕೆ ಅನಾರೋಗ್ಯವಾಗುತ್ತಿದೆ. 1980ನೇ ಇಸವಿಯಿಂದ ಪ್ರೊಡಕ್ಷನ್ ಮತ್ತು ಅದರ ಲಾಭ ಎರಡೂ ಕಡಿಮೆಯಾಗುತ್ತಾ ಬಂದಿದೆ. ಈ ಕಾರಣದಿಂದ ಈ ಕೈಗಾರಿಕೆ 1997-98ನೇ ಇಸವಿಯಿಂದ ಲಾಭ ಮಾಡಬಹುದು ಎಂದು ಅಂದಾಜು ಮಾಡಲಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ಒಂದು ಕಾಲದಲ್ಲಿ ಚಿನ್ನದ ಮೊಟ್ಟೆ ಇಡುತ್ತಿದ್ದ ಕೋಳಿಯಾಗಿತ್ತು ಈ ಎನ್‌ಜಿಇಎಫ್. ಇವತ್ತು ಈ ಸ್ಥಿತಿಗೆ ಬಂದಿದೆ. ಕಾರಣ ಕೇಳಿದರೆ ನೀವು ಮಾರುಕಟ್ಟೆ ಪಾಲಿನಲ್ಲಿ ಇಳಿತ, ಹಳೆಯ ಯಂತ್ರ ಅದನ್ನೆಲ್ಲ ಹೇಳಿ ಕಳಪೆಯಾದ ಕಾರ್ಯಸಂಸ್ಕೃತಿ ಸರಿಯಾದ ಹೊಣೆಗಾರಿಕೆಯಿಲ್ಲವೆಂದು ಹೇಳಿದ್ದೀರಿ. ಈಗ 20 ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳಿದ್ದೀರಿ. ವಿಆರ್‌ಎಸ್ ಸ್ಕೀಮ್ ಎಂದು ಇದನ್ನೆಲ್ಲ ಹೇಳಿದ್ದೀರಿ. ಈ ಕಾರ್ಖಾನೆ 1965ನೇ ಇಸವಿಯಲ್ಲಿ ಶುರುವಾಯಿತು. 11 ವರ್ಷಕ್ಕೆ ಒಬ್ಬರೇ ಒಬ್ಬರು ಸಿಎಂಡಿ ಇದ್ದರು. 20 ವರ್ಷಗಳಲ್ಲಿ 10 ಜನ ಸಿಎಂಡಿಗಳನ್ನು ಇವತ್ತು ನಾವು ನೋಡಿದ್ದೇವೆ. ಮಾನ್ಯ ಜೆ.ಹೆಚ್.ಪಟೀಲ್‌ರವರು ಈ ಸಂಸ್ಥೆ ರೋಗಗ್ರಸ್ಥವಾಗಿದ್ದು, ನಷ್ಟ ಅನುಭವಿಸಲಿಕ್ಕೆ ದುರಾಡಳಿತವೆ ಕಾರಣ ಎಂದು ಹೇಳಿದ್ದಾರೆ. ಎನ್‌ಜಿಇಎಫ್‌ನಲ್ಲಿ ಒಂದು ಒಂದು ಒಳ್ಳೆಯ ಆಡಳಿತ ಕೊಡುವುದಕ್ಕೆ, ದುರಾಡಳಿತ ನಡೆಯದಿರುವ ಹಾಗೆ ಒಬ್ಬ ಒಳ್ಳೆಯ ಟೆಕ್ನೊಕ್ರಾಟ್ ಹಾಕುವುದರ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆಯೇ? ಜೊತೆಗೆ ಸರ್ಕಾರದಲ್ಲಿರುವ ಅನೇಕರು ಅನ್ಸಲರಿ ಯೂನಿಟ್‌ಗಳನ್ನು ಮಾಡಿ, ಎನ್‌ಜಿಇಎಫ್‌ನ ರಾಮೆಟಿರಿಯಲ್ಸ್‌ನ್ನು ಅಲ್ಲಿಗೆ ಕಳುಹಿಸಿ ಈ ಎನ್‌ಜಿಇಎಫ್ ರೋಗಗ್ರಸ್ಥ ಸ್ಥಿತಿಗೆ ಬರಲಿಕ್ಕೆ ಕಾರಣರಾಗಿರುವುದು ತಮ್ಮ ಗಮನದಲ್ಲಿದೆಯೇ?

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಈಗಾಗಲೇ, ನಾವು ಹಲವಾರು ಕಾರಣಗಳನ್ನು ಕೊಟ್ಟಿದ್ದೇವೆ, ಅದರಲ್ಲಿ ಮೆಷಿನರಿದು, ಟೆಕ್ನಾಲಜಿ ಇಂಪ್ರೂವ್‌ಮೆಂಟ್ ಆಗಬೇಕೆಂದು ಕೂಡ ಹೇಳಿದ್ದೇನೆ. ಈಗಾಗಲೇ ಅಲ್ಲಿ ತಜ್ಞರು ಇದ್ದಾರೆ, ಟೆಕ್ನೋಕ್ರಾಟ್ಸ್ ಇದ್ದಾರೆ ಇಲ್ಲವೆಂದು ಅಲ್ಲ. ಆದರೆ, ಸಿಎಂಡಿಯವರು ಟೆಕ್ನೋಕ್ರಾಟ್ ಇರಬೇಕೋ ಬೇಡವೋ ಎನ್ನುವ ಬಗ್ಗೆ ಸರ್ಕಾರ ಯಾವುದೂ ನಿರ್ಣಯ ಮಾಡಿಲ್ಲ. ನಮ್ಮ ಸರ್ಕಾರ ಬಂದನಂತರ ನಾವು ಕೈಗಾರಿಕೆಯಲ್ಲಿ ಆರು ತಿಂಗಳಿಗೆ ಮೂರು ತಿಂಗಳಿಗೆ ಯಾವ ಅಧಿಕಾರಿಯನ್ನು ಬದಲಾವಣೆ ಮಾಡಿಲ್ಲ. ನನಗೆ ತಿಳಿದ ಪ್ರಕಾರ ಎನ್‌ಜಿಇಎಫ್‌ನಲ್ಲಿ

ಯಾರು ಸಿಎಂಡಿ ಇದ್ದಾರೆ, ಅವರು ಎರಡೂವರೆ ವರ್ಷಗಳಿಂದ ಅಲ್ಲಿರಬಹುದೆಂದು ನನ್ನ ಅಂದಾಜು. ಅದೇ ಪ್ರಕಾರ ತಮ್ಮ ಎರಡನೆಯ ಪ್ರಶ್ನೆ, ಕೆಲವು ಅಧಿಕಾರಿಗಳು ಆನ್ಸಲರಿ ಯೂನಿಟ್‌ಗಳನ್ನು ಪ್ರಾರಂಭ ಮಾಡಿದ್ದಾರೆಂದು ಹೇಳಿದ್ದೀರಿ, ಅದು ನನ್ನ ಗಮನಕ್ಕೆ ಬಂದಿಲ್ಲ. ನನ್ನ ಗಮನಕ್ಕೆ ತಂದರೆ ಸರ್ಕಾರ ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಎನ್‌ಜಿಇಎಫ್‌ನಲ್ಲಿ ಸುಮಾರು 135 ಕೋಟಿ ರೂಪಾಯಿ ಲುಕ್ಸಾನು ಇದೆ ಎನ್ನತಕ್ಕ ಮಾತನ್ನು ತಾವು ಬಹಿರಂಗಪಡಿಸಿದ್ದೀರಿ. ಇದು ಸುಮಾರು ವರ್ಷಗಳಿಂದ ಲುಕ್ಸಾನ್‌ದಲ್ಲಿದೆ. ಇತ್ತೀಚೆಗೆ ಹೆಚ್ಚಿನ ಲುಕ್ಸಾನು ಆಗಿದೆ ಎನ್ನತಕ್ಕದ್ದು ತಾವು ಕೊಟ್ಟಿರತಕ್ಕ ಅಂಕಿಸಂಖ್ಯೆಯಿಂದ ಹೇಳಬಹುದು. ಇದು ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಪ್ರಮುಖವಾದ ಪಬ್ಲಿಕ್ ಸೆಕ್ಟಾರ್. ಇತ್ತೀಚೆಗೆ ಒಂದು ಟ್ರೆಂಡ್ ಏನು ಬೆಳೆಯುತ್ತಿದೆ, ಪಬ್ಲಿಕ್ ಸೆಕ್ಟಾರ್‌ನ್ನೆಲ್ಲ ಡಿಸ್‌ಇನ್‌ವೆಸ್ಟ್‌ಮೆಂಟ್ ಮಾಡಿ ಬೇರೆಯವರಿಗೆ ಹ್ಯಾಂಡ್ ಓವರ್ ಮಾಡಬೇಕೆನ್ನತಕ್ಕ ಒಂದು ಟ್ರೆಂಡ್ ನಮ್ಮ ಸರ್ಕಾರದಲ್ಲಿ ಇವತ್ತು ಬರುತ್ತಾ ಇದೆ. ಇದು ಹಿಂದೆಯೂ ಕೂಡ ನನ್ನ ಮುಂದೆ ಪ್ರಪೋಸಲ್ ಬಂದಿತ್ತು. ಇದು ಒಂದೇ ಅಲ್ಲ, ಸೋಪ್ಸ್ ಅಂಡ್ ಡಿಟರ್ಜೆಂಟ್ ಲಾಸ್ ಇದೆ ಅದು ತೆಗೆಯಿರಿ, ಎನ್‌ಜಿಇಎಫ್ ಲಾಸ್ ಅದು ತೆಗೆಯಿರಿ, ಎಲೆಕ್ಟ್ರಿಕಲ್ ಫ್ಯಾಕ್ಟರಿ ಮಲ್ಲೇಶ್ವರಂ ಅದು ತೆಗೆಯಿರಿ, ಯಾವ್ಯಾವ ಪಬ್ಲಿಕ್ ಸೆಕ್ಟಾರ್‌ನ್ನು ಹಿಂದಿನ ಕಾಲದಲ್ಲಿ ಒಳ್ಳೆಯ ಉದ್ದೇಶಕ್ಕಾಗಿ ಪ್ರಾರಂಭ ಮಾಡಲಾಗಿತ್ತು. ಅದನ್ನು ನಾವು ಗುರುತು ಮಾಡದ ಅಲ್ಲಿರತಕ್ಕ ಮ್ಯಾನೇಜ್‌ಮೆಂಟನ್ನು ಸರಿಯಾಗಿ ನೋಡಿಕೊಳ್ಳದೆ ಇವತ್ತು ನಾವು ಇದನ್ನು ಬೇರೆಯವರ ಕೈಗೆ ಕೊಡಬೇಕೆನ್ನತಕ್ಕ ಒಂದೇ ಉದ್ದೇಶದಿಂದ ಮಾಡಿಕೊಂಡು ಹೋದರೆ, ಖಂಡಿತವಾಗಿ ಇದರಿಂದ ಬಹಳ ದೊಡ್ಡ ಪೆಟ್ಟು ನಮ್ಮ ಕಾರ್ಖಾನೆಗಳಿಗೆ ಬೀಳುತ್ತದೆ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ನೀವು ಪ್ರೈವೇಟ್‌ದವರಿಗೆ ಕೊಡುವುದಕ್ಕಿಂತ ಎಲ್ಲ ಟೆಕ್ನೋಕ್ರಾಟ್ಸ್‌ನ್ನು ಬದಲಾಯಿಸುವ ಹಾಗೆ ಇಲ್ಲ, ಎಲ್ಲ ನೌಕರರನ್ನು ರಿಟ್ರೆಂಚ್ ಮಾಡಿ ಮನೆಗೆ ಕಳುಹಿಸಿ ಸಂಪೂರ್ಣವಾಗಿ ನೀವು ಪ್ರೈವೇಟ್‌ದವರಿಗೆ ವಹಿಸಿಕೊಡುತ್ತಿಲ್ಲ. ಅದಕ್ಕೆ ನೀವು ಮ್ಯಾನೇಜ್‌ಮೆಂಟ್‌ನಲ್ಲಿ ಏನಾದರು ಬದಲಾವಣೆ ಮಾಡಿ ಇದಕ್ಕೆ ಮರಿಸ್ತಿ ಮಾಡಬೇಕೇ ಹೊರತಾಗಿ ಇಡೀ ಕಾರ್ಖಾನೆಯನ್ನೆ ಬೇರೆಯವರ ಕೈಯಲ್ಲಿ ಕೊಡುತ್ತೇವೆನ್ನತಕ್ಕದ್ದು ಸರಿಯಲ್ಲ. ಏಕೆಂದರೆ ಈ ತರಹ ಆದ ಹೀಗಲ್ಲ, ಹಿಂದೆ ಶ್ರೀಮಾನ್ ಹೆಗಡೆಯವರು ಇದ್ದಾಗ ಕೂಡ ಇದನ್ನು ಎಇಜಿ ಜರ್ಮನ್ ಕಂಪನಿಗೆ ಕೊಟ್ಟು, ಹೆಚ್ಚಿನ ಷೇರ್ ಬಂಡವಾಳವನ್ನು ಕೊಟ್ಟು ಇದನ್ನು ಸ್ಥಳಾಂತರ ಮಾಡಬೇಕು ಅಥವಾ ಅವರ ವಶಕ್ಕೆ ಕೊಡಬೇಕೆನ್ನತಕ್ಕದ್ದು ಇತ್ತು. ಸಾಕಷ್ಟು ಪ್ರತಿಭಟನೆ ಬಂತು. ಹಿಂದೆ ಶ್ರೀಮಾನ್ ದಾಸ್‌ರವರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು. ಆ ಕಾಲದಲ್ಲಿಯೇ ಒಂದು ದೊಡ್ಡ ಗೊಂದಲವುಂಟಾಗಿತ್ತು. ಅದನ್ನು ನಾವೇ ನಡೆಸಬಹುದು ಎನ್ನತಕ್ಕ ಹೇಳಿಕೆಯನ್ನು ಈ ಸದನದಲ್ಲಿ ಕೊಟ್ಟಿದ್ದಾರೆ. ಅದಕ್ಕೆ ದಯವಿಟ್ಟು ಬೇರೆಯವರ ಕೈಯಲ್ಲಿ ಕೊಡುವುದಕ್ಕಿಂತಲೂ ಸರ್ಕಾರದವರೇ ಇದನ್ನು ನಡೆಸಿ ಇದಕ್ಕೆ ಶಕ್ತಿ ತುಂಬಿ

ಪ್ರಾಫಿಟ್‌ನಲ್ಲಿ ಬರುವಂತೆ ನೀವು ಮಾಡಬೇಕು. ಇಲ್ಲದಿದ್ದರೆ ನಮ್ಮ ಎಲ್ಲ ಎಂಪ್ಲಾಯಿಸ್‌ನ್ನು ತೆಗೆದುಹಾಕುತ್ತಾರೆ ಈ ಲಿಬರೈಸೇಷನ್ ಹೆಸರಿನ ಮೇಲೆ. ಆ ಕೆಲಸವನ್ನು ದಯವಿಟ್ಟು ಅವರು ಮಾಡಬೇಕೆಂದು ಹೇಳಿ ನಾನು ಕೇಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನಾನು ಪ್ರೈವಟೈಸ್ ಮಾಡುತ್ತೇನೆಂದು ಹೇಳಲಿಲ್ಲ. ಪ್ರಪೋಸಲ್ ಏನೆಂದರೆ ಆ ಕೈಗಾರಿಕೆಗೆ ಅವರ ಕಾಲಮೇಲೆ ನಿಂತು ಅವರೇ ರಿಹ್ಯಾಬಿಲಿಟೇಟ್ ಮಾಡಬೇಕೆಂದು ನಾವು ಸರ್ಕಾರದಿಂದ ಸಹಾಯ ಮಾಡಿದ್ದೇವೆ. ಇಲ್ಲಿ ಪ್ರೈವಟೈಸ್ ಮಾಡುವ ಪ್ರಶ್ನೆ ಇಲ್ಲ. ರಾಜ್ಯ ಸರ್ಕಾರ ಪಬ್ಲಿಕ್ ಅಂಡರ್‌ಟೇಕಿಂಗ್ಸನ್ನು ಪ್ರೈವಟೈಸ್ ಮಾಡಬೇಕೆಂದು ಇಚ್ಛೆಯಿಲ್ಲ. ಯಾವ ಕೈಗಾರಿಕೆ ಕಂಟಿನ್ಯುಯಸ್ ಆಗಿ ಅನಾರೋಗ್ಯದಿಂದ ಇದೆ, ಸರ್ಕಾರದಿಂದ ಯಾವ ಪ್ರಯತ್ನ ಮಾಡಿದರೂ ಅದನ್ನು ಆರೋಗ್ಯ ಸ್ಥಿತಿಗೆ ತರಲಿಕ್ಕೆ ಸಾಧ್ಯವಾಗುವುದಿಲ್ಲ ಅಂತಹ ಸಂದರ್ಭದಲ್ಲಿ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಉದಾಹರಣೆಗೆ ಮೈಸೂರು ಲ್ಯಾಂಪ್ಸ್ ತಾವು ಉದಾಹರಣೆ ಕೊಟ್ಟಿರಿ. ಮೈಸೂರು ಲ್ಯಾಂಪ್ಸ್ ಪ್ರೊಡೆಕ್ಷನ್ ಇಲ್ಲದೆ ಎರಡು ತಿಂಗಳಿಂದ ನಿಂತಿತ್ತು. ಹಲವಾರು ಕಾರಣಗಳಿರಬಹುದು. ಮೊನ್ನೆ ಫೈನಾನ್ಸ್ ಮಿನಿಸ್ಟರ್ ಹತ್ತಿರ ಮಾತನಾಡಿ ಅವರ ಕಡೆಯಿಂದ 5 ಕೋಟಿ ರೂಪಾಯಿಗಳನ್ನು ಮೊನ್ನೆ ರಿಲೀಸ್ ಮಾಡಿದ್ದೇವೆ. ಕೇವಲ ಕೈಗಾರಿಕೆ ಪ್ರಾರಂಭವಾಗಬೇಕೆನ್ನುವ ಕಾರಣದಿಂದ. ಬ್ಯಾಂಕ್ ಗ್ಯಾರಂಟಿ 14 ಕೋಟಿ ಕೊಡಲಿಕ್ಕೆ ಒಪ್ಪಿಕೊಂಡಿದ್ದೇವೆ. ಈಗ ಸರ್ಕಾರದಲ್ಲಿ ರಿಸೋರ್ಸಸ್ ಬಹಳ ಕಡಿಮೆಯಿದೆ. ರಿಸೋರ್ಸಸ್ ಯಾವ ಪ್ರಕಾರ ಖರ್ಚು ಮಾಡಬೇಕು ಅದಕ್ಕೊಂದು ಪ್ರಿಯಾರಿಟಿ ಇದೆ. ಯಾವುದೋ ಒಂದು ಕೈಗಾರಿಕೆ ಅನಾರೋಗ್ಯವಿದ್ದಾಗ, ಅದು ರಿಹ್ಯಾಬಿಲೇಟೇಟ್ ಮಾಡಿ ಆ ಕೈಗಾರಿಕೆಗೆ ಎಷ್ಟು ಸಹಾಯ ಮಾಡಬೇಕೋ ಅಷ್ಟು ಖಂಡಿತವಾಗಿ ಮಾಡುತ್ತೇವೆ. ಇಷ್ಟೆಲ್ಲ ಮಾಡಿಯೂ ಅದನ್ನು ಸುಧಾರಣೆ ಮಾಡುಲಿಕ್ಕೆ ಸಾಧ್ಯವಿಲ್ಲವೆಂದರೆ ಅಂತಹ ವಿಚಾರ ಬಂದಾಗ ಸರ್ಕಾರ ಯಾವುದೋ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. In the interest of the industry, in the interest of the State Exchequer and also in the interest of labour ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಸರ್ಕಾರ ಒಂದು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅದನ್ನು ಪ್ರೈವಟೈಸ್ ಮಾಡುವ ಪ್ರಶ್ನೆಯಲ್ಲ. ತಮ್ಮ ಕಾಲದಲ್ಲಿ ಒಂದು ಒಳ್ಳೆಯ ಅವಕಾಶ ಬಂದಿತ್ತು ಸಾರ್. ತಮ್ಮ ಕಾಲದಲ್ಲಿ ಬಿಹೆಚ್‌ಇಎಲ್‌ನವರು 51 ಪರ್ಸೆಂಟ್ ಈಕ್ವಿಟಿ ಕೇಳಿದ್ದರು. but they refused to hand over. ನಮ್ಮ ಕಾಲದಲ್ಲಿ ಕೇಳಿದಾಗ We were willing to hand over at 75%. We told not even 61% but you can take it over for 75% but they did not respond. We did tell them. ಸೆಂಟ್ರಲ್ ಗೌರ್ನಮೆಂಟ್ ಅಂಡರ್‌ಟೇಕಿಂಗ್ಸ್‌ಗೆ ನಾವು ಕೊಡಬೇಕೆಂದು ತಮ್ಮ ಕಾಲದಲ್ಲಿ ಬಂದಿತ್ತು. ಆವಾಗ ತಾವು ಅದರ ಬಗ್ಗೆ ಹೆಚ್ಚಿನ ಆಸಕ್ತಿ ತೆಗೆದುಕೊಂಡಿಲ್ಲ. ಆದರೆ ನಮ್ಮ ಕಾಲದಲ್ಲಿ ಪ್ರೈವಟೈಸ್ ಮಾಡಬಾರದು ಪಬ್ಲಿಕ್‌ಸೆಕ್ಟಾರ್‌ಗೆ ಕೊಡುವ ಅಂತ

ಹೇಳಿ we were willing but they backed out.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬಹುಶಃ ಇವರಿಗೆ ಅರ್ಧಂಬರ್ಧ ಗೊತ್ತಿರಬಹುದು.

ಅಧ್ಯಕ್ಷರು:- ಇದು ಏನಾಗುತ್ತಿದೆ ಅಂದರೆ ಎನ್‌ಜಿಇಎಫ್ ಅದೆಲ್ಲ ನೀವು ಜನರಲೈಸ್ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದು ಬಹಳ ಮುಖ್ಯವಾದುದು ಸಾರ್.

ಅಧ್ಯಕ್ಷರು:- ನನಗೆ ಏನಾಗುತ್ತದೆ ನೋಡಿ, It is 12 clock, I have allowed ten minutes.

(INTERRUPTIONS)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನು ಅನಾವಶ್ಯಕವಾಗಿ ಮಾತನಾಡುವುದಿಲ್ಲ. ನಾನು ಹೇಳುವುದೇನೆಂದರೆ, ಬಿಹೆಚ್‌ಇಎಲ್‌ನಲ್ಲಿ ಗುರಪ್ಪನವರ್ ಎನ್ನತಕ್ಕವರು ಬಳ್ಳಾರಿಯವರು ಅವರು ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾಗ ನಾನೇ ಸ್ವತಹ ಹೋಗಿ ಮೀಟಿಂಗ್ ಮಾಡಿ ಅವರಿಗೆ ಇಲ್ಲಿ ಕರೆಯಿಸಿ ಚರ್ಚೆ ನಡೆಯಿತು. ಯಾರು ಒಪ್ಪಲಿಲ್ಲವೆನ್ನುವುದಕ್ಕೆ ಸ್ವಲ್ಪ ಫೈಲ್ ತೆಗೆದು ನೋಡಿ. ಗೊತ್ತಾಗುತ್ತದೆ ಯಾರ್ಯಾರು ಅಡ್ಡ ಬಂದರು ಏನೇನು ಮಾಡಿದರು ಎಂದು ನಿಮ್ಮ ಹತ್ತಿರ ಫೈಲ್ ಇದೆ. ನಾನು ನಿಮಗೆ ಹೇಳುತ್ತೇನೆ ಹೊಸ ಫ್ಯಾಕ್ಟರಿಗಳು ಯಾವುದೇ ಬರಲಿ, ಹೊಸ ಇಂಡಸ್ಟ್ರೀಸ್ ಬರುವುದಕ್ಕೆ ನೀವೇನು ಮಾಡುತ್ತೀರಿ? ಹಿಂದೆ ಮಾಡಿದ್ದೇವೆ ನೀವೇನು ಮಾಡುತ್ತೀರಿ ಆ ಪಾಲಿಸಿ ಏನೆಂದರೆ ಇಂಟರೆಸ್ಟ್ ಕೆಲವು ಕಡೆ ವೇವ್ ಮಾಡತಕ್ಕದ್ದು. ಎಲೆಕ್ಟ್ರಿಸಿಟಿ ಕನ್ಸೆಷನ್ ಕೊಡತಕ್ಕದ್ದು, ನಾನ್ ಅಗ್ರಿಕಲ್ಚರ್ ಫೀಸ್ ಎಕ್ಸಮ್ಪ್ಟ್ ಮಾಡುವುದು ಸೇಲ್ಸ್‌ಟ್ಯಾಕ್ಸ್ ಕನ್ಸೆಷನ್ ಕೊಡತಕ್ಕದ್ದು ಇಂತಹವು ಅನೇಕ ಕನ್ಸೆಷನ್ ಕೊಡುತ್ತೇವೆ. ಅವೇ ಕನ್ಸೆಷನ್ಸ್ ಅನ್ನು ನಮ್ಮ ಪಬ್ಲಿಕ್ ಸೆಕ್ಟರ್‌ಗಳಿಗೆ ಕೊಟ್ಟು ಯಾವ್ಯಾವು ಲುಕ್ಸಾನ್‌ದಲ್ಲಿವೆ ಎಂದು ನೋಡಿ ನನಗೆ ಗೊತ್ತಿದೆ, ಕೆಲವು ಜನರು ಇದನ್ನು ಪ್ರೈವಟೈಸೇಷನ್ ಮಾಡಿಸಬೇಕು ಡಿಸಿನ್‌ವೆಸ್ಟ್‌ಮೆಂಟ್ ಮಾಡಿಸಬೇಕೆಂದು ಅಡ್ಡಾಡುತ್ತಿದ್ದಾರೆ. ಕೆಲವು ಎಂಪ್ಲಾಯಿಸ್ ಇಚ್ಛೆ ಏನಿದೆ ಅಂದರೆ ನಾವು ಇದನ್ನು ಸರಿಯಾಗಿ ಸ್ವೆಗ್ತನ್ ಮಾಡುತ್ತೇವೆ ಎಂದು ಇದೆ. ಹೀಗೆ ಎರಡೂ ವ್ಯೂಸ್ ಇವೆ. ಅದಕ್ಕೆ ಅಂತಹವರಿಗೆ ಆಸ್ಪದ ಕೊಡದೆ ಇದನ್ನು ಸ್ವೆಗ್ತನ್ ಮಾಡುವುದಕ್ಕೆ ಯಾವ್ಯಾವ ಸವಲತ್ತುಗಳನ್ನು ಕೊಡಬೇಕು ಮತ್ತು ಸಹಾಯ ಮಾಡಬೇಕೋ ಅದನ್ನೆಲ್ಲ ಮಾಡಿ. ಪಬ್ಲಿಕ್‌ಸೆಕ್ಟಾರ್ಸ್ ಅದು ಮೈಸೂರು ಲ್ಯಾಂಪ್ಸ್ ಇರಬಹುದು, ಎಲೆಕ್ಟ್ರಿಕ್ ಕಂಪನಿ ಇರಬಹುದು ಎನ್‌ಜಿಇಎಫ್ ಇರಬಹುದು, ಸೋಪ್ಸ್ ಅಂಡ್ ಡಿಟರ್ಜೆಂಟ್ ಇರಬಹುದು, ಯಾವುದೇ ಇರಬಹುದು ಅದಕ್ಕೆ ತಾವು ಕಾಳಜಿ ವಹಿಸಬೇಕೆಂದು ನಾನು ಹೇಳುವುದು.

MR.SPEAKER:- It is becoming a regular discussion.

I am very unhappy. Every question you cannot develop into a policy matter. Let there be not a debate here. Allow me to conduct the Question Hour. But every question whether it relates to Hostel or industry.....

SRI R.V.DESHPANDE:- Sir, just to set the records clear what I was submitting, the State Government in one year period has given directly or indirectly Rs.90 Crores to NGEF. No Government in the history has given such an amount to any industry, even to Mysore Lamps. We are giving maximum support to the State Public Sectors and no other Government in the history has given so much when compared to the amount we had released in the last one to one and a half years. ನಾವೇನು ಕೊಟ್ಟಿದ್ದೇವೆ ಅದನ್ನು ಯಾವ ಸರ್ಕಾರ ಕೊಟ್ಟಿಲ್ಲ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್:- ಮಾನ್ಯ ಅಧ್ಯಕ್ಷರೆ, ಸ್ವಾಮಿ, ಪ್ರಪಂಚದಲ್ಲಿಯೇ ಬಹಳ ಉತ್ತಮವಾದಂತಹ ಎಇಜಿ ವೆಸ್ಟ್‌ಜರ್ಮನ್ ಕೊಲಾಬರೇಷನ್‌ನಿಂದ ಎನ್‌ಜಿಇಎಫ್ ಪ್ರಾರಂಭವಾಗಿದ್ದು ಇವತ್ತಿಗೂ ಸಹಿತ ಇದನ್ನು ಉತ್ತಮ ರೀತಿಯಿಂದ ನಡೆಸಿದರೆ ಉತ್ತಮವಾದ ಇಂಡಸ್ಟ್ರಿಯಾಗಿ ಲಾಭದಾಯಕವಾಗಿ ನಡೆಯುತದೆ. ಇವತ್ತು ಎಲ್ಲಾ ರೀತಿಯ ಸಪೋರ್ಟ್ ಕೊಡುತ್ತಿದ್ದಾರಲ್ಲ, ಹಣಕಾಸಿನ ಸಪೊರ್ಟ್ ಬೇಡ, ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನವರು ತಮಗೆ ಬೇಕಾದ ಟ್ರಾನ್ಸ್‌ಫಾರ್ಮರ್ಸ್‌ನ್ನು ಇವರಲ್ಲಿ ಎಷ್ಟು ಖರೀದಿ ಮಾಡುತ್ತಿದ್ದಾರೆ? ಸರ್ಕಾರಿ ಉದ್ದಿಮೆಯಲ್ಲಿ ತಯಾರಾಗುವಂತಹ ಟ್ರಾನ್ಸ್‌ಫಾರ್ಮರ್ಸ್ ಎಷ್ಟನ್ನು ನಮ್ಮ ಎಲೆಕ್ಟ್ರಿಸಿಟಿ ಬೋರ್ಡ್ ಖರೀದಿ ಮಾಡುತ್ತಿದೆ? ಪವರ್ ಕಾರ್ಪೊರೇಷನ್ ಖರೀದಿ ಮಾಡುತ್ತಿದೆ? ಇಂತಸ ಒಂದು ಉತ್ತಮವಾದ ಟ್ರಾನ್ಸ್‌ಫಾರ್ಮರ್ಸ್ ಇಂತಹ ಎಲೆಕ್ಟ್ರಿಕಲ್ ಎಕ್ವಿಪ್‌ಮೆಂಟ್ಸ್ ತಯಾರು ಮಾಡುವಂತಹ ಎನ್‌ಜಿಇಎಫ್‌ನಲ್ಲಿ ನಮ್ಮ ಸರ್ಕಾರಿ ಇಲಾಖೆಗಳು ಖರೀದಿ ಮಾಡುತ್ತಿಲ್ಲ. ಪ್ರೈವೇಟ್‌ನಲ್ಲಿ ಖರೀದಿ ಮಾಡುತ್ತಿದ್ದಾರೆ. ಇವರಿಗೆ ಹಣಕಾಸಿನ ಯಾವುದೇ ಸವಲತ್ತುಗಳನ್ನು ಕೊಡುವಂತಹ ಅವಶ್ಯಕತೆಯಿಲ್ಲ, ಬರೀ ನಮ್ಮ ಕೆಇಬಿ ಮತ್ತು ಕೆಪಿಸಿ ಯವರು ಖರೀದಿ ಮಾಡಿದರೆ ಅದು ಉತ್ತಮವಾದ ಇಂಡಸ್ಟ್ರಿಯಾಗಿ ನಡೆಯಲಿಕ್ಕೆ ಸಾಧ್ಯವಿದೆ.

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಮ್ಯಾಕ್ಸಿಮಮ್ ಆರ್ಡರ್ಸ್‌ನ್ನು ನಮಗೆ ಕೆ.ಇ.ಬಿ. ಕೊಡುತ್ತಾ ಇದೆ. ಮಾನ್ಯ ಗೌರವಾನ್ವಿತ ಸದಸ್ಯರಿಗೆ ಮಾಹಿತಿ ಬೇಕಾದರೆ ಕೊಡುತ್ತೇನೆ. ಮೋಟಾರ್ಸ್, ಸ್ವಿಚ್‌ಗೇರ್ಸ್, ಟ್ರಾನ್ಸಫಾರ್ಮರ್ಸ್ ಎಷ್ಟು ಆರ್ಡರ್ಸ್ ಕೆ.ಇ.ಬಿ.ಯಿಂದ ಬಂದಿದ್ದಾವೆ, ಕೆ.ಪಿ.ಸಿ.ಯಿಂದ ಬಂದಿದ್ದಾವೆ, ಎಷ್ಟು ಸಪ್ಲೈ

ಮಾಡಿದ್ದೇವೆ, ಇದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ.

ಶ್ರೀ ಪಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ ಈ ನೂತನ ವಿದ್ಯುತ್ ಕಾರ್ಖಾನೆ ಪುನಶ್ಚೇತನ ಬಗ್ಗೆ ಕೆಲವು ದಕ್ಷ ಅಧಿಕಾರಿಗಳನ್ನು ಅಲ್ಲಿ ಇಟ್ಟರೆ ನಷ್ಟಕ್ಕೆ ಅವಕಾಶ ಇರುವುದಿಲ್ಲ. ಮಾನ್ಯ ಬೈರೇಗೌಡರು ಕಳೆದ ಮೂರು-ನಾಲ್ಕು ವರ್ಷಗಳಿಂದ ನತತವಾಗಿ ಇದು ಸಾರ್ವಜನಿಕ ಉದ್ದಿಮೆಯಾಗಿ ಸರ್ಕಾರ ಉಳಿಯಬೇಕೆಂದು ಹೋರಾಟ ಮಾಡಿದ್ದಾರೆ. ನಾನು ಮತ್ತು ಅನೇಕ ಸ್ನೇಹಿತರು ಇದರ ಬಗ್ಗೆ ಮಾತನಾಡಿದ್ದೇವೆ. ನಾನು ಒಂದು ಏನು ಹೇಳುತ್ತೇನೆ ಎಂದರೆ, ಮೈಸೂರ್ ಲ್ಯಾಂಪ್ ವರ್ಕ್ಸ್.....

ಅಧ್ಯಕ್ಷರು:- ದಯಮಾಡಿ ಜನರಲೈಸ್ ಮಾಡುವುದಕ್ಕೆ ಹೋಗಬೇಡಿ. ಎನ್.ಜಿ.ಇ.ಎಫ್.ಗೆ ಸಂಬಂಧಪಟ್ಟಿದ್ದು ಏನಾದರೂ ಇದ್ದರೆ ಹೇಳಿ. ಮತ್ತೆ ಮೈಸೂರು ಲ್ಯಾಂಪ್ಸ್‌ಗೆ, ಮೈಸೂರು ಪೇಪರ್ ಮಿಲ್ಸ್‌ಗೆ ಹೋದರೆ ಲೇಟಾಗುತ್ತದೆ.

ಶ್ರೀ ಪಾಟಾಳ್ ನಾಗರಾಜ್:- ನಾನು ಮೈಸೂರು ಲ್ಯಾಂಪ್ ವರ್ಕ್ಸ್ ಬಗ್ಗೆ ಏಕೆ ಹೇಳುತ್ತಿದ್ದೇನೆ ಎಂದರೆ, ದಿವಂಗತ ಮುನಿಸ್ವಾಮಿ ಎಂದು ಒಬ್ಬರು ಐ.ಎ.ಎಸ್. ಅಧಿಕಾರಿ ಅಲ್ಲಿ ಇದ್ದಾಗ, ಮೈಸೂರು ಲ್ಯಾಂಪ್ ವರ್ಕ್ಸ್ ಬಹಳ ಮೇಲೆ ಬೆಳೆದಿತ್ತು. ಅದಕ್ಕೆ ದಕ್ಷ ಅಧಿಕಾರಿಗಳು ಕಾರಣರಾಗಿರುತ್ತಾರೆ. ಈಗ ತಮಗೆ ನಾನು ಹೇಳುತ್ತೇನೆ ಸರ್ಕಾರಿ ನೂತನ ವಿದ್ಯುತ್ ಕಾರ್ಖಾನೆಯ ಶ್ರೀ ಎಸ್.ಕೆ.ದಾಸ್ ಬಗ್ಗೆ ಒಳ್ಳೆಯ ಅಭಿಪ್ರಾಯ ಇದೆ. ನಮಗೆ ನೀವು ಏನು ಕೊಡದಿದ್ದರೂ ಚಿಂತೆಯಿಲ್ಲ, ಒಳ್ಳೆಯ ಅಧಿಕಾರಿಯನ್ನು ಕೊಡಿ, ನಾವು ಅದನ್ನು ಬೆಳೆಸುತ್ತೇವೆ ಅಂತ ಕಾರ್ಮಿಕರೆಲ್ಲರೂ ಹೇಳುತ್ತಾರೆ. ಉತ್ತಮವಾದಂಥ ಕರ್ನಾಟಕ ಸರ್ಕಾರಕ್ಕೆ ಕಿರೀಟಪ್ರಾಯವಾಗಿರತಕ್ಕಂಥ ಈ ಕಾರ್ಖಾನೆಯನ್ನು ಬೆಳೆಸುವುದಕ್ಕೆ ಪ್ರಾಮಾಣಿಕವಾದ ಚಿಂತನೆಯನ್ನು ಏನು ಮಾಡುತ್ತೀರಿ ಅದನ್ನು ತಾವು ಹೇಳಿ. ಬರೇ ನೀವು ಹಣ ಕೊಡುವುದು, ಬಿಡುವುದು, ಖಾಸಗಿಯವರಿಗೆ ಕೊಡುತ್ತೇವೆ ಎಂದು ಹೇಳುವುದು ಬೇಡ. ಈಗ ನಮ್ಮಲ್ಲಿ ಅನೇಕ ಉತ್ತಮವಾದ ಅಧಿಕಾರಿಗಳು ಇದ್ದಾರೆ. ನೀವು ಅಂಥ ಅಧಿಕಾರಿಗಳನ್ನು ಹಾಕಿ ಈ ಕಾರ್ಖಾನೆಯನ್ನು ಬೆಳೆಸುವುದಕ್ಕೆ, ಉಳಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಆರ್.ವಿ.ದೇಶಪಾಂಡೆ:- ಸರ್ಕಾರ ಒಳ್ಳೆಯ ಅಧಿಕಾರಿ ಎಂದು ತಿಳಿದುಕೊಂಡೇ ಅಲ್ಲಿ ಹಾಕುತ್ತದೆ. ಈಗ ಅವರು ಯಾರೋ ಅಧಿಕಾರಿ ಬಗ್ಗೆ ಪ್ರಸ್ತಾಪ ಮಾಡಿದರು. ಅವರಿಂದಾಗಿ ಮೈಸೂರು ಲ್ಯಾಂಪ್ಸ್ ಉಜ್ಜಲಾವಸ್ಥೆಗೆ ಬಂದಿತು ಎಂದು ಹೇಳಿದರು. ನಾನು ರೆಕಾರ್ಡ್ ತೋರಿಸುತ್ತೇನೆ. ಅವರ ಕಾಲದಲ್ಲಿ ಏನೇನು ಆಯಿತು, ಅವರಿಂದ ಏನು ನಷ್ಟವಾಗಿದೆ, ಏನು ಹಾನಿಯಾಗಿದೆ ಎಂಬುದನ್ನು ತಿಳಿಸುತ್ತೇನೆ. ಈಗ ಅದರ ಬಗ್ಗೆ ಚರ್ಚೆ ಬೇಡ.

ಅಧ್ಯಕ್ಷರು:- ಅಂಥದ್ದು ಬಹಳ ಆಗಿವೆ.

ಶ್ರೀ.ಜಿ.ವಿ.ಶ್ರೀರಾಮರೆಡ್ಡಿ:- ಸಾರ್ವಜನಿಕ ಉದ್ಯಮಗಳ ಬಗ್ಗೆ ಸದನ ಸಮಿತಿ ನೇಮಕ

ಮಾಡಿದ್ದರು. ಅದರ ಬಗ್ಗೆ ಏನು ಮಾಡಿದ್ದೀರಿ?

MR.SPEAKER:- It is altogether a different question...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಇದಕ್ಕೆ ಸಂಬಂಧಪಟ್ಟಿದ್ದುದು ಇದು.

ಅಧ್ಯಕ್ಷರು:- ಯಾವುದಕ್ಕೆ ಸಂಬಂಧಪಟ್ಟಿದೆ? ನೀವು ಕೇಳುತ್ತಾ ಇರಿ, ಅವರು ಹೇಳುತ್ತಾರೆ. ನನ್ನ ಪಾಡಿಗೆ ನಾನು ಮೂರು ಗಂಟೆ ಪ್ರಶ್ನೋತ್ತರ ವೇಳೆಯನ್ನು ನಡೆಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಎರಡೂ ಸದನಗಳ ಸಮಿತಿಯ ರಚನೆಯಾಗಿ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಮಾಡಿದ್ದೀರಿ?

(ಗೊಂದಲ)

ಅಧ್ಯಕ್ಷರು:- ಫ್ರಂಟ್ ಸೀಟ್‌ನಲ್ಲಿ ಇರತಕ್ಕಂಥ ನೀವೇ ರಿಯಲೈಸ್ ಮಾಡಿಕೊಳ್ಳದೇ ಹೋದರೆ ಹೇಗೆ? ನೀವು ರಿಯಲೈಸ್ ಮಾಡಿಕೊಂಡರೆ ಬೇರೆ ಯಂಗ್‌ಸ್ಟರ್ಸ್‌ಗೆ ನಾನು ಹೇಳಬಹುದು. ಫ್ರಂಟ್ ಬೆಂಚ್‌ನಲ್ಲಿರುವ ನೀವೇ ಕೋಪರೇಟ್ ಮಾಡದೇ ಹೋದರೆ your question is not connected with this question. This question is primarily relating to rejuneviation. You are asking a policy matter which does not come within the perview of this question.

SRI G.V.SRIRAMAREDDY:- I am not asking about policy matter.....

ಅಧ್ಯಕ್ಷರು:- ದೇಶಪಾಂಡೆಯವರೇ, ನೀವು ಹೇಳಿ.

ಶ್ರೀ ಆರ್.ವಿ.ದೇಶಪಾಂಡೆ:- ಆ ಸಮಿತಿಯು ಇದರ ಬಗ್ಗೆ ರಿಪೋರ್ಟ್ ಕೊಟ್ಟಿದೆ. ಆ ರಿಪೋರ್ಟನ್ನು ಗಮನದಲ್ಲಿಟ್ಟಕೊಂಡು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ. ಆ ವಿವರ ಬೇಕಾದರೆ ಬೇರೆ ಪ್ರಶ್ನೆ ಕೇಳಿದರೆ, ಉತ್ತರ ಕೊಡುತ್ತೇನೆ.

ಅಧ್ಯಕ್ಷರು:- ನೀವು ಮಿನಿಷ್ಟರ್ ಆಗಿರತಕ್ಕಂಥವರು ಕ್ವಶ್ಚನ್‌ಗೆ ಸಂಬಂಧಪಡದೇ ಇರತಕ್ಕಂಥಾದ್ದು ಕೇಳಿದರೆ ದಯಮಾಡಿ ನೋಟೀಸ್ ಕೇಳಿ. You please say that you cannot answer. That will help. Otherwise, it becomes difficulty. Every question becomes debate here...

ವಿಷಯ:- ಪುತ್ತೂರು ಪುರಸಭೆಯ ಕುಡಿಯುವ ನೀರಿನ ವ್ಯವಸ್ಥೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 65 (417)